ಸಮಾಧಾನ. 'ನಮ್ಮಮ್ಮ ತುಂಬಾ ಒಳ್ಳೆಯವರು' ಎನ್ನುವ ಬಿರುದನ್ನು ಕೊಟ್ಟುಬಿಡುತ್ತಿದ್ದರು. ತಾಯಿ ತಂದೆಯರು ಶಿಶುಪಾಲನೆಯಲ್ಲಿ ಅಘೋಷಿತ ಶ್ರೇಣಿವ್ಯವಸ್ಥೆಯನ್ನು ಪಾಲಿಸುತ್ತಿದ್ದರು. ತಾಯಿ ಹಕ್ಕಿ ತನ್ನ ರೆಕ್ಕೆಯ ಒಳಗೆ ಎಲ್ಲಾ ಮರಿಗಳನ್ನು ಸೇರಿಸಿಕೊಂಡು ಕಾಪಿಡುವಂತೆ ತಾಯಿಮಕ್ಕಳ ಬೆಚ್ಚನೆಯ ಬಾಂಧವ್ಯ. ಹಾಗಾಗಿ ಮಕ್ಕಳು ತಮ್ಮ ಬೇಡಿಕೆಗೆ ಮೊದಲು ಅರ್ಜಿ ಹಾಕುವುದು ತಾಯಿಯ ಬಳಿಯೇ. ಅದು ಸ್ವಲ್ಪ ಸಂಕೀರ್ಣ ಬೇಡಿಕೆಯಾದರೆ, ತಾಯಿ ಅದನ್ನು ಮೊದಲು ನಿರಾಕರಿಸಿ, ಮಗುವಿನ ಒತ್ತಡ ಜಾಸ್ತಿಯಾದಾಗ 'ತಾಳು ನಿಮ್ಮಪ್ಪನ ಒಂದು ಸಲಿ ಕೇಳಿಬಿಡ್ತೀನಿ' ಎಂದು ಅರ್ಜಿಯನ್ನು ಮೇಲ್ದರ್ಜೆಗೆ ಏರಿಸುವುದು ವಾಡಿಕೆ. ಅದೇನಾದರೂ ಇನ್ನಷ್ಟು ಘನವಾದ ವಿಚಾರವಾಗಿದ್ದರೆ 'ಅಪ್ಪ ಬಿಡುವಾಗಿದ್ದಾಗ ಕೇಳ್ತೀನಿ ತಾಳು' ಎಂದು ಹೇಳಿ, ಮಗು ಮನೆಯಲ್ಲಿ ಇಲ್ಲದಾಗ ಚರ್ಚಿಸಿ, ನಿರ್ಧರಿಸುವುದು ರೂಢಿ.

ಪಿಂಕಿ ಈ ಬಾರಿ ಮನೆಗೆ ಹಿಂದಿರುಗಿ 'ಅಮ್ಮಾ' ಎಂದು ಕರೆದ ಧ್ವನಿಯ ಕಾಕುವಿನಲ್ಲೇ 'ಏನೋ ಭಾರಿ ಬೇಡಿಕೆಗೆ ಪೀಠಿಕೆ' ಎಂದು ಅವಳ ತಾಯಿಗೆ ಗೊತ್ತಾಗಿಹೋಯಿತು.

'ಇನ್ನು ಅಡುಗೆ ಮುಗಿದಿಲ್ಲಮ್ಮ; ಆಮೇಲೆ ಮಾತನಾಡೋಣ್ವಾ?'

'ನೀ ಈಗ್ಲೇ ಏನು ಮಾಡಬೇಡಮ್ಮ; ಸುಮ್ನೆ ಕೇಳಿಸ್ಕೊ. ಅಷ್ಟೇ'

'ಸರಿ, ಹೇಳು'

'ಮುಂದಿನವಾರ ಶಾಲೆ ಪ್ರಾರಂಭವಾಗ್ತಾ ಇದೆ. ಅದಕ್ಕೆ 'ನಾವು' ಪೂರ್ತಿ ತಯಾರಿ ಆಗೇ ಇಲ್ವಲ್ಲಮ್ಮ'

'ನೋಡಮ್ಮ, ಹೊಸ ತರಗತಿಗೆ ಹೊಸ ಪುಸ್ತಕಗಳನ್ನು ಆಗಲೇ ತಂದು ಆಗಿದೆ. ಅದಕ್ಕೆ ರಟ್ಟುಹಾಕಿ ನೀಟಾಗಿ ಇಟ್ಟುಕೊಳ್ಳುವುದು ನಿನ್ನ ಕೆಲಸ. ಇವತ್ತೇ ಅದನ್ನು ಮಾಡಿಬಿಡು.'

'ಅದನ್ನ ಮಾಡ್ತೀನಮ್ಮಾ ಆದರೆ ಹೊಸ ಮೊಬೈಲ್ ನಂಗೆ ಇನ್ನೂ ಕೊಡ್ಸೇ ಇಲ್ವಲ್ಲಮ್ಮ!'

'ಮೊಬೈಲಾ, ನಿಂಗಾ?' ಎಂಟನೇ ತರಗತಿಯ ಪಿಂಕಿಯ ಈ ಬೇಡಿಕೆಗೆ ಅವಳ ಅಮ್ಮನ ಬಾಯಿ ಆಶ್ಚರ್ಯದಿಂದ ಸ್ವಲ್ಪ ಹೊತ್ತು ತೆರೆದುಕೊಂಡೆ ಇತ್ತು.

'ಹೂಂನಮ್ಮಾ, ನನ್ನ ಸ್ನೇಹಿತರು ಎಲ್ಲರಿಗೂ ಅವರ ಮನೆಯಲ್ಲಿ ಹೊಸ ತರಗತಿಗೆ ಹೊಸ ಮೊಬೈಲ್ ಕೊಡಿಸ್ತಾ ಇದಾರಮ್ಮಾ'

'ಅಲ್ಲ ಕಣೇ, ಶಾಲೆಗೆ ಮೊಬೈಲ್ ತೊಗೊಂಡು ಹೋಗ್ಬಾರ್ದು ಅಂತ ಗೊತ್ತಿಲ್ವಾ?'

'ಇಲ್ಲಮ್ಮಾ ಹೊಸ ಮೊಬೈಲ್‌ನ ನಾವು ಶಾಲೆಗೆ ತೊಗೊಂಡು ಹೋಗುವುದಿಲ್ಲ; ಶಾಲೆಯಿಂದ ಬಂದ ಮೇಲೆ ಮಾತನಾಡುವುದಕ್ಕೆ ಬೇಕಾಗುತ್ತೆ'

'ಅಷ್ಟು ಹೊತ್ತು ಶಾಲೆಯಲ್ಲಿ ಪಾಠವನ್ನೂ ಕೇಳ್ದೆ ಹರಟೆ ಹೊಡೆದಿರ್ತೀರಿ. ನಿಮ್ಮ ಟೀಚರ್ ಎಲ್ಲಾ ಪಿಟಿಎಂನಲ್ಲೂ 'ನಿಮ್ಮ ಮಗಳು ಯಾವಾಗಲೂ ತರಗತಿಯಲ್ಲಿ ಹರಟೆ ಹೊಡೆಯುತ್ತಿರುತ್ತಾಳೆ. ಅವಳ ಆಪ್ತ ಸ್ನೇಹಿತೆನ ಬೇರೆ ಬೆಂಚಲ್ಲಿ ಕೂರಿಸಿದ್ದರೂ ಹಿಂದೆ ತಿರುಗಿ ಮಾತಾಡ್ತಾ ಇರ್ತಾಳೆ. ವಿರಾಮದ ಸಮಯ ಆದ ಮೇಲೆ ಅದು ಹ್ಯಾಗೋ ಬೇರೆ ಕಡೆ ಮತ್ತೆ ಒಟ್ಟಿಗೆ ಹರಟೆ ಹೊಡೆಯೋಕ್ಕೆ ಕೂತುಬಿಟ್ಟಿರುತ್ತಾರೆ' ಅಂತ ಪ್ರತಿ ಸಲ ಹೇಳ್ತಾರೆ. ಅಂತದ್ರಲ್ಲಿ ಮನೆಗೆ ಬಂದ ಮೇಲೆ ಮಾತಾಡೋದು ಏನಿರುತ್ತೆ?'

'ಅದೇ ನಮ್ಮ ಹೋಂವರ್ಕು, ಪ್ರಾಜೆಕ್ಟು, ಟ್ರಿಪ್ಪು, ಸಂಜೆ ಯಾವಾಗ, ಎಲ್ಲಿ ಸಿಗೋಣ? ಹೀಗೆ ಮಾತಾಡೋದು ತುಂಬಾ ವಿಚಾರ ಇರುತ್ತಮ್ಮ. ಅದು ಒಬ್ಬರ ಹತ್ತಿರ ಅಲ್ಲ, ಮೂರು ನಾಲ್ಕು ಜನರ ಹತ್ತಿರ ಮಾತಾಡಬೇಕಾಗುತ್ತೆ.'

'ಶಾಲೆಯಿಂದ ಬಂದ ಮೇಲೆ ಹೋಂವರ್ಕ್ ಮುಗಿಸಿ, ಆಟ ಆಡಲು ಸೇರ್ತಿರಲ್ಲ ಆಗ ಮಾತಾಡ್ಕೊಳ್ಳಿ. ಮೊಬೈಲ್ ಎಲ್ಲ ಏನು ಬೇಡ.'

'ಅವರು ಎಲ್ಲರ ಹತ್ರ ಮೊಬೈಲ್ ಇರುತ್ತೆ. ನನ್ಹತ್ರ ಇಲ್ದೇ ಹೋದ್ರೆ ಎಷ್ಟು ಅವಮಾನ ಆಗುತ್ತೆ. ಅವರೆಲ್ಲ ನನ್ನ ಆಡ್ಕೋತಾರೆ ಗೊತ್ತಾ ಅವರ ಅಮ್ಮಂದಿರು ನಿನ್ನ'

'ಅವರ ವಿಚಾರ ನನಗೆ ಬಿಡು. ಇದರಲ್ಲಿ ಅವಮಾನ ಆಗುವಂತದ್ದು ಏನು ಇಲ್ಲ. ನಿನ್ನ ಮೊಬೈಲ್‌ನ ನೀನು ಕೆಲಸಕ್ಕೆ ಸೇರ್ತಿಯಲ್ಲ ಆಗ ತಗೋ. ಅಲ್ಲಿವರೆಗೂ ಮೊಬೈಲ್ ವಿಚಾರ ನಿನ್ನ ತಲೆಯಿಂದ ತೆಗೆದು ಹಾಕಿಬಿಡು'. ಈ ಮಾತುಗಳನ್ನು ಕೇಳಿ ಪಿಂಕಿಗೆ ಅತೀವ ಆಶ್ಚರ್ಯವಾಯಿತು. ಅವಳ ಸ್ನೇಹಿತರೊಂದಿಗೆ ಮಾಡಿದ್ದ ಚಿಂತನ ಮಂಥನದಲ್ಲಿ ಯಾರೂ ಈ ರೀತಿಯ ಉತ್ತರ ಬರಬಹುದೆಂದು ಊಹಿಸಿ ಯೋಜನೆ ರೂಪಿಸಿರಲಿಲ್ಲ. ಈಗ ತಾನೇ ಶಾಲೆಯ ಶುಲ್ಕ ಕೊಟ್ಟಿದೀವಿ ಮರಿ, ಇನ್ನೊಂದು ಆರು ತಿಂಗಳಾದ ಮೇಲೆ ಕೊಡುಸ್ತೀವಿ' ಅಂತಲೋ 'ಈ ವರ್ಷ ಇಲ್ಲ. ಮುಂದಿನ ವರ್ಷ ನೋಡೋಣ' ಎಂದು ಹೇಳಿ ಕಟ್ಟುಬೀಳುತ್ತಾರೆ. ಆಮೇಲೆ ಅದನ್ನು ಮುಂದು ಮಾಡಿ, ಮೊಬೈಲ್ ಪಡೆಯುವುದು ಸುಲಭ. ಒಬ್ಬರಿಗೋ ಇಬ್ಬರಿಗೋ ಅದು ಸಿಕ್ಕಿದರೆ, ಉಳಿದವರ ಕೈಗೆ ಅದು ತಾನಾಗೆ ಬಂದು ಬೀಳುತ್ತದೆ ಎಂಬ ಯೋಜನೆ ಇಲ್ಲಿ ತಲೆಕೆಳಗಾಗಿತ್ತು. ಹಾಗಾಗಿ ಪಿಂಕಿ ಹೇಳಬೇಕಾಗಿದ್ದ ಉಳಿದ ಸಂಯೋಜಿತ ವಾದದ ಮಾತುಗಳು ಹಾಗೆ ಇಂಗಿ ಹೋದವು.

ಎಷ್ಟಾದರೂ ಅವಳು 'ಪಿಂಕಿಯ ಅಮ್ಮ'; ಆಕೆ ರವೀಂದ್ರನಾಥ ಟ್ಯಾಗೋರ್ ಅವರ **'children should not be limited by your own learning, as they are born in a different time and have their own unique potential'** ಎಂಬ ಮಾತಿನ ಅರ್ಥವನ್ನು ಸಂಪೂರ್ಣವಾಗಿ ಅರಿತಿದ್ದಳು. ಅದನ್ನು ಅಕ್ಷರಶಃ ಪಿಂಕಿಯ ವಿಚಾರದಲ್ಲಿ ಪಾಲಿಸುತ್ತಿದ್ದಳು. ಅಲ್ಲದೆ ಅದನ್ನು ತನಗೂ ಅಳವಡಿಸಿಕೊಂಡು ಮಗಳಿಗೆ ತಕ್ಕ ಈ ಕಾಲದ ತಾಯಿಯಾಗಿದ್ದಳು! ಹಾಗಾಗಿ ಸೇರಿಗೆ ಸವ್ವಾಸೇರಲ್ಲ ದೇಡ್ ಸೇರು!

'ನಾಳೆ, ಮುಂದಿನ ವಾರ, ಮುಂದಿನ ತಿಂಗಳು' ಹೀಗೆ ಮಗಳ ಬೇಡಿಕೆಗಳಿಗೆ ವಾಯಿದೆ ನೀಡಿ, ಅನಂತರ



ಸಿಕ್ಕಿಹಾಕಿಕೊಂಡು, ಕೊಟ್ಟ ಮಾತಿಗೆ ತಪ್ಪಿನಡೆದರೆ ಮೆಚ್ಚನಾ ಪರಮಾತ್ಮನೂ ಎಂದುಕೊಂಡು, ಕೇಳಿದ್ದನ್ನು ಕೊಡಿಸಿ ಕೊಡಿಸಿ ಬುದ್ಧಿವಂತಳಾಗಿದ್ದಳು. ಅಷ್ಟೇ ಅಲ್ಲ, ಪಿಂಕಿಯ ಸ್ನೇಹಿತರ ತಾಯಂದಿರ ಬಳಿ ಮೊಬೈಲ್‌ನಲ್ಲಿ ನಡೆಯುವ ಚಿಂತನ ಮಂಥನಗಳಲ್ಲಿ ಎಲ್ಲರೂ ಒಕ್ಕೊರಳಿನಿಂದ ಹೀಗೆ ಪ್ರತಿಕ್ರಿಯಿಸುವ ನಿರ್ಧಾರಕ್ಕೆ ಬಂದುಬಿಟ್ಟಿದ್ದರು. ಒಟ್ಟಿನಲ್ಲಿ ಮಕ್ಕಳು ಮತ್ತು ತಾಯಂದಿರ ಈ 'ಪ್ರೀಮಿಯಂ ಲೀಗಿನಲ್ಲಿ' ಒಬ್ಬರಿಗೆ ಗೊತ್ತಾಗದಂತೆ ಮತ್ತೊಬ್ಬರು ಯೋಜನೆಗಳನ್ನು ಹೊಸೆದು, ಹೆಣೆದು ಇಟ್ಟುಕೊಂಡಿದ್ದರು. ಅಮ್ಮ ಕೊಟ್ಟ ತನಗೆ ಇಷ್ಟವಾದ ಬ್ರೋಕಲಿ ಸೂಪ್ ಕುಡಿದು ಪಿಂಕಿ ಚೇತರಿಸಿಕೊಂಡಳು.

'ಅಮ್ಮಾ ಇನ್ನೊಂದು ವಿಚಾರ. ಕೋವಿಡ್ ಮತ್ತೆ ಪ್ರಾರಂಭ ಆಗ್ತಾ ಇದೆಯಂತೆ. ಆಗ ಮನೆಯಿಂದಾನೆ ಆನ್‌ಲೈನ್ ತರಗತಿಗೆ ಸೇರ್ಬೇಕಾದ್ರೆ ಹೊಸ ಮೊಬೈಲ್ ಬೇಕೇ ಬೇಕು ಅಲ್ವಾ. ನೀನೇ ಹೇಳಿದ್ದೆಯಲ್ಲ 'ಎಲ್ರೂ ಕೊಳ್ಳಲು ನುಗ್ಗಿದರೆ ಅಂಗಡಿಯವರು ಬೆಲೆ ಜಾಸ್ತಿ ಮಾಡಿಬಿಡ್ತಾರೆ. ಕೊಂಡುಕೊಳ್ಳಲು ಜನ ಇಲ್ಲದಿದ್ರೆ ಕಡಿಮೆ ಬೆಲೆಗೆ ಕೊಡ್ತಾರೆ' ಅಂತ. ಅದಕ್ಕೆ ಈಗಲೇ ಕೊಂಡರೆ ಕಡಿಮೆ ಬೆಲೆಗೆ ಒಳ್ಳೆಯ ಮೊಬೈಲ್ ಸಿಗುತ್ತೆ. ತಡ ಮಾಡಿದ್ರೆ ಎಲ್ಲರೂ ನುಗ್ತಾರೆ, ಬೆಲೆನೂ ಜಾಸ್ತಿ ಆಗುತ್ತೆ' ಮತ್ತೊಂದು ಬಾಣ ಅವಳ ಬತ್ತಳಿಕೆಯಿಂದ ಹೊರಬಂದಿತ್ತು.

ಇದಕ್ಕೆ ಖಂಡಿತವಾಗಿ ಪ್ರತ್ಯುತ್ತರ ಅಮ್ಮನ ಬಳಿ ಇರುವುದಿಲ್ಲ ಎಂದು ಪಿಂಕಿಗೆ ನಿಶ್ಚಯವಾಗಿತ್ತು. ಅದಕ್ಕೆ ಸರಿಯಾಗಿ ಅಮ್ಮ ಏನೂ ಉತ್ತರ ಕೊಡಲಿಲ್ಲ. ಅವಳಿಗೆ ಪಿಂಕಿ ತಾನು ಹೇಳಿದ ಮಾತುಗಳನ್ನು ಕೇಳಿ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾಳಲ್ಲ; ಮಾರುಕಟ್ಟೆಯ ವ್ಯವಹಾರ, ವರ್ತಮಾನದ ವಿಚಾರಗಳನ್ನು ತನ್ನ ಬುದ್ಧಿವಂತ ಮಗಳು ತಿಳಿದುಕೊಂಡಿದ್ದಾಳಲ್ಲ ಎಂದು ಹೆಮ್ಮೆಯಿಂದ ಹೃದಯ ತುಂಬಿಬಂದಿತ್ತು. ಮಾತು ತಕ್ಷಣ ಹೊರಡಲಿಲ್ಲ. ಪಿಂಕಿಯು ಮಾತನಾಡದೆ ನಿಂತ ಅಮ್ಮನ ಮುಖವನ್ನೇ ಪ್ರತೀಕ್ಷಿದಳು. ಅಮ್ಮ ಪಿಂಕಿಯ ತಲೆ ಸವರಿ, ಅವಳನ್ನು ಎಡಗೈಯಲ್ಲಿ ಹತ್ತಿರಕ್ಕೆ ಎಳೆದುಕೊಂಡು ಬಲಗೈಯಿಂದ ಅವಳ ಗಲ್ಲವನ್ನು ಒತ್ತಿ 'ಮರಿ ನಿನಗೆ ಓದಲು ತೊಂದರೆ ಆಗಬಾರದು ಎಂದು ನಾನು ಒಳ್ಳೆಯ ಮಾಸ್ಕ್‌ಗಳನ್ನು ಆಗಲೇ ತಂದಿಟ್ಟಿದ್ದೇನೆ. ಅದನ್ನು ಧರಿಸಿ ಶಾಲೆಗೆ ಹೋಗು. ಅಕಸ್ಮಾತ್ ಆನ್‌ಲೈನ್ ತರಗತಿಗಳಾದರೆ ಇರಲಿ ಅಂತ, ಅಪ್ಪನ ಹಳೆಯ ಲ್ಯಾಪ್‌ಟಾಪ್ ದುರಸ್ತಿ ಮಾಡಿಸಿ ಇಟ್ಟಿದ್ದೇನೆ. ಇನ್ನು ಮೊಬೈಲ್ ಗಿಬೈಲ್ ಯಾವುದಕ್ಕೂ ಹಣ ವ್ಯರ್ಥ ಮಾಡದೆ, ನೀನು ನಿನ್ನ ಮೇಜಿನ ಮುಂದೆ ಕುಳಿತು ಕಲಿಯಬಹುದು' ಎಂದು ರಮಿಸಿದಳು. ಅದಕ್ಕೆ ಕರಗಿದ ಪಿಂಕಿ ಅಮ್ಮನನ್ನು ತಬ್ಬಿಕೊಂಡಳು. ಅವಳ ತಲೆಯಲ್ಲಿ 'ತನ್ನ ಸ್ನೇಹಿತರ ಮನೆಯಲ್ಲಿ ಏನೇನಾಗಿರುತ್ತೋ? ಸಂಜೆ ಬೇಗ ಹೋಗಿ ಅವರನ್ನು ಭೇಟಿಯಾಗಬೇಕು' ಎಂಬ ಯೋಚನಾ ಲಹರಿ ಓಡುತ್ತಿತ್ತು.

ಪ್ರತಿಕ್ರಿಯಿಸಿ: **feedback@sudha.co.in**